2ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

ಸಿ.ಸಿ.ನಂಃ 11635-2017

| | | | |
|---|---|---|---|
| ಸಾಕ್ಷಿದಾರರ ಹೆಸರು | ಕಿರಣ್ ವಿ | ಸಿ ಡಬ್ಲ್ಯು | 14 |
| ತಂದೆಯ ಹೆಸರು | ವೆಂಕಟೇಶ್ | ಪಿ ಡಬ್ಲ್ಯು | 2 |
| ವಯಸ್ಸು | 41 ವರ್ಷ | | |
| ಉದ್ಯೋಗ | ಪಿ.ಐ ಸಿ.ಐ.ಡಿ | | |
| ವಾಸಸ್ಥಾನ | ನಾಗರಬಾವಿ, ಬೆಂಗಳೂರು | | |

ಪ್ರಮಾಣ ವಚನ ಬೋಧಿಸಿದ ದಿನಾಂಕ : 26.03.2026

ಕಲಂ. 299 ರ ಸಿ.ಆರ್.ಪಿ.ಸಿ ಅಡಿಯಲ್ಲಿ ಮುಖ್ಯ ವಿಚಾರಣೆ : ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಡಿಸೆಂಬರ್ 2012 ರಿಂದ ಜುಲೈ 2016 ರವರೆಗೆ ಬಸವನಗುಡಿ ಪೊಲೀಸ್ ಠಾಣೆಯಲ್ಲಿ ನಾನು ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ13.01.2014 ರಂದು ನಾನು ಠಾಣಾಧಿಕಾರಿಯಾಗಿದ್ದಾಗ ರಾತ್ರಿ 7.50 ಗಂಟೆಗೆ ಚಾಸಾ 1 ರವರು ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊ ಸಂಖ್ಯೆ 09/2014 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ತೆರಳಿ ಚಾಸಾ 1 ರವರು ಸ್ಥಳ ತೋರಿಸಿದ ಮೇರೆಗೆ ಚಾಸಾ 2 ಮತ್ತು 3 ರವರ ಸಮಕ್ಷಮ ರಾತ್ರಿ 9.30 ರಿಂದ 10.30 ಗಂಟೆಯ ನಡುವೆ ಕೃತ್ಯ ನಡೆದ ಸ್ಥಳದ ಪಂಚನಾಮೆ ಕ್ರಮವನ್ನು ಕೈಗೊಂಡಿರುತ್ತೇನೆ. ಪಂಚನಾಮೆ ಸಮಯದಲ್ಲಿ ಕೃತ್ಯಕ್ಕೆ ಬಳಸಿದ ಒಂದು steel ತಲ್ವಾರ್ ಮತ್ತು ಕಬ್ಬಿಣದ ಲಾಂಗ್ ಅನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ನಂತರ ಠಾಣೆಗೆ ಬಂದು ಸದರಿ ಮಾಲುಗಳನ್ನು ಮಾಲು ಪಟ್ಟಿ ಸಂಖ್ಯೆ 8/2014 ರಲ್ಲಿ ಅಳವಡಿಸಿಕೊಂಡಿರುತ್ತೇನೆ.

ಅದೇ ದಿನ 1ನೇ ಆರೋಪಿಯನ್ನು ದೂರುದಾರರು ಕೃತ್ಯ ನಡೆದ ಸ್ಥಳದಲ್ಲಿಯೇ ಹಿಡಿದು ಮುಂದಿನ ಕ್ರಮಕ್ಕೆ ನಮ್ಮ ವಶಕ್ಕೆ ನೀಡಿದ್ದು ಸದರಿ ಆರೋಪಿಯನ್ನು ದಸ್ತಗಿರಿ ನಿಯಮ ಅನುಸರಿಸಿ ದಸ್ತಗಿರಿ ಕ್ರಮ ಅನುಸರಿಸಿರುತ್ತೇನೆ. ಆತನು ಕೂಲಂಕುಷವಾಗಿ ವಿಚಾರಣೆ ನಡೆಸಿ ಸ್ವ ಇಚ್ಛಾ ಹೇಳಿಕೆಯನ್ನು ದಾಖಲಿಸಿರುತ್ತೇನೆ. ದಿಃ 14.01.2014 ರಂದು ದಸ್ತಗಿರಿಯಾದ 1ನೇ ಆರೋಪಿಯನ್ನು ಮಾನ್ಯ

ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಂತರ ಅದೇ ದಿನ ಚಾಸಾ 1 ರಿಂದ 6 ರವರ ಹೇಳಿಕೆ ದಾಖಲಿಸಿರುತ್ತೇನೆ. ದಿಃ 16.01.2014 ರಂದು ಚಾಸಾ 7 ರಿಂದ 10 ರವರ ಜೊತೆ ನಾನು ಆರೋಪಿ 2 ಮತ್ತು 4ರವರನ್ನು ನಮ್ಮ ವಶಕ್ಕೆ ಪಡೆದು ಸಂಜೆ 5.30 ಗಂಟೆಗೆ ಠಾಣೆಗೆ ಬಂದು ವರದಿಯೊಂದಿಗೆ ದಸ್ತಗಿರಿ ನಿಯಮ ಅನುಸರಿಸಿ ದಸ್ತಗಿರಿ ಕ್ರಮ ಕೈಗೊಂಡಿರುತ್ತೇನೆ. ನಂತರ ಅದೇ ದಿನ ಚಾಸಾ 7ರಿಂದ 10 ರವರ ಹೇಳಿಕೆ ದಾಖಲಿಸಿರುತ್ತೇನೆ. ಅದೇ ದಿನ ದಸ್ತಗಿರಿ ಆಗಿದ್ದ 2 ಮತ್ತು 4ನೇ ಆರೋಪಿಗಳನ್ನು ಕೂಲಂಕುಷವಾಗಿ ವಿಚಾರಣೆಗೊಳಪಡಿಸಿ ಸ್ವ ಇಚ್ಛಾ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ. ನಂತರ ಸದರಿ ಆರೋಪಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿಃ 01.02.2014 ರಂದು ವಿಕ್ಟೋರಿಯಾ ಆಸ್ಪತ್ರೆಯಿಂದ ಗಾಯಾಳುವಿನ ಗಾಯದ ಪ್ರಮಾಣ ಪತ್ರ ಸ್ವೀಕರಿಸಿ ತನಿಖೆಗೆ ಅಳವಡಿಸಿಕೊಂಡಿರುತ್ತೇನೆ. 24.02.2014 ರಂದು ಚಾಸಾ 10, 11 ಮತ್ತು 14 ರವರ ಜೊತೆ ನಾನು ಆರೋಪಿ 5ರವರನ್ನು ನಮ್ಮ ವಶಕ್ಕೆ ಪಡೆದು ಸಂಜೆ 5.00 ಗಂಟೆಗೆ ಠಾಣೆಗೆ ಬಂದು ವರದಿಯೊಂದಿಗೆ ದಸ್ತಗಿರಿ ನಿಯಮ ಅನುಸರಿಸಿ ದಸ್ತಗಿರಿ ಕ್ರಮ ಕೈಗೊಂಡಿರುತ್ತೇನೆ. ನಂತರ ಅದೇ ದಿನ ಚಾಸಾ 10, 11 ರಿಂದ 14 ರವರ ಹೇಳಿಕೆ ದಾಖಲಿಸಿರುತ್ತೇನೆ. ಅದೇ ದಿನ ದಸ್ತಗಿರಿ ಆಗಿದ್ದ 5ನೇ ಆರೋಪಿಯನ್ನು ಕೂಲಂಕುಷವಾಗಿ ವಿಚಾರಣೆಗೊಳಪಡಿಸಿ ಸ್ವ ಇಚ್ಛಾ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ. ಸ್ವ ಇಚ್ಛಾ ಹೇಳಿಕೆಯಲ್ಲಿ ಕೃತ್ಯಕ್ಕೆ ಬಳಸಿದ ಪಲ್ಸರ್ ಬೈಕ್ ಕೆಎ 41 ವಿ 8753 ಅನ್ನು ತನ್ನ ಮನೆಯ ಮಾಳಗಾಳದಲ್ಲಿ ನಿಲ್ಲಿಸಿರುವುದಾಗಿ ತಿಳಿಸಿದ್ದ ಮೇರೆಗೆ ದಿಃ 25.02.2014 ರಂದು ಆರೋಪಿ ತಿಳಿಸಿದ ಸ್ಥಳಕ್ಕೆ ತೆರಳಿ ಆರೋಪಿ ಹೇಳಿದ ಕೃತ್ಯಕ್ಕೆ ಬಳಸಿದ ದ್ವಿ ಚಕ್ರ ವಾಹನವನ್ನು ಪಂಚನಾಮೆ ಮೂಲಕ ಬೆಳಿಗ್ಗೆ 10.30 ರಿಂದ 11.45 ರ ನಡುವೆ ಅಮಾನತ್ತು ಪಡಿಸಿಕೊಂಡು ಠಾಣೆಗೆ ಬಂದು ಠಾಣಾ ಮಾಲು ಪಟ್ಟಿ ಸಂಖ್ಯೆ 21/2014 ರಲ್ಲಿ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ದಸ್ತಗಿರಿ ಆಗಿದ್ದ 5 ನೇ ಆರೋಪಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಂತರ ಪ್ರಕರಣದ ತನಿಖೆ ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಸದರಿ ದಾಖಲೆಗಳು ಜೆರಾಕ್ಸ್ ಪ್ರತಿಯಾಗಿರುವುದರಿಂದ ಅವುಗಳನ್ನು ಗುರುತಿಸಲಾಗಿರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ

**(ಸಾಹೀಲ್ ಅಹಮದ್ ಎಸ್ ಕುನ್ನಿಭಾವಿ)**
2ನೇ ಅ ಮು ಮ ದಂ.